**ದೋ.ಸಾ. :43 ಫ್ರಾ.ಸಾ. : 58**

**ದಿನಾಂಕಃ 10–03–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

18. 1 ನೇ ಆರೋಪಿಯ ಬಗ್ಗೆ ತನಿಖಾಧಿಕಾರಿಗಳಿಗೆ ಯಾವ ರೀತಿ ಮಾಹಿತಿ ಬಂದಿದೆ ಎಂಬ ಬಗ್ಗೆ ಬರವಣಿಗೆಯಲ್ಲಿ ನಾನು ನೋಡಿರುವುದಿಲ್ಲ. 1 ನೇ ಆರೋಪಿಯ ಮಾಹಿತಿಯ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು 1 ನೇ ಆರೋಪಿಯ ಪತ್ತೆಗಾಗಿ ಖಾಸಗಿ ಟ್ಯಾಕ್ಸಿಯಲ್ಲಿ ಗೋವಾಕ್ಕೆ ಹೋಗಿರುತ್ತೇವೆ. ಸದರಿ ಟ್ಯಾಕ್ಸಿಯನ್ನು ತನಿಖಾಧಿಕಾರಿಗಳೇ ವ್ಯವಸ್ಥೆ ಮಾಡಿರುತ್ತಾರೆ. ನಾವು ಮಡಗಾಂವ್‌ಗೆ ಹೋದಾಗ, ಅಲ್ಲಿನ ಪೊಲೀಸರ ಅನುಮತಿಯನ್ನು ಪಡೆದಿರುವುದಿಲ್ಲ. ಅದೇ ರೀತಿ, ರೈಲ್ವೇ ಪೊಲೀಸರ ಅನುಮತಿಯನ್ನೂ ಸಹ ನಾವು ಪಡೆದಿರುವುದಿಲ್ಲ. ಬೇರೆ ರಾಜ್ಯಗಳಿಗೆ ಆರೋಪಿತರ ಪತ್ತೆಗಾಗಿ ಹೋದಾಗ, ಅಲ್ಲಿಯ ಸ್ಥಳೀಯ ಪೊಲೀಸರ ಅನುಮತಿ ಬೇಕಾಗುತ್ತದೆ ಎಂದರೆ ಸಾಕ್ಷಿಯು ಮೊದಲಿಗೆ ಪಡೆಯಬೇಕಾಗುತ್ತದೆ ಎಂದು ನಂತರ ಅನಮತಿ ಪಡೆಯಬೇಕಾಗಿಲ್ಲ ಆದರೆ ಮಾಹಿತಿ ನೀಡಿದರೆ ಸಾಕು ಎಂದು ನುಡಿಯುತ್ತಾರೆ. ಆರೋಪಿಯ ಪತ್ತೆಗಾಗಿ ಹೋದ ಬಗ್ಗೆ ವಹಿಯನ್ನು ನಿರ್ವಹಿಸಿದ್ದೀರಾ? ಎಂದರೆ ಸಾಕ್ಷಿಯು, ತನಿಖಾಧಿಕಾರಿಗಳು ಠಾಣಾ ಡೈರಿಯಲ್ಲಿ ನಮೂದಿಸುತ್ತಾರೆ ಎಂದು ನುಡಿಯುತ್ತಾರೆ. ಸದರಿ ಡೈರಿಯನ್ನು ಬಿಟ್ಟು ಬೇರೆ ಯಾವುದೇ ದಾಖಲೆ ಇರುವುದಿಲ್ಲ. ಮಡಗಾಂವ್ ರೈಲ್ವೇ ನಿಲ್ದಾಣಕ್ಕೆ ಹೋದ ಬಗ್ಗೆ ಯಾವುದೇ ಪ್ಲಾಟ್ ಫಾರ್ಮ್ ಟಿಕೆಟ್ ಖರೀದಿ ಮಾಡಿರುವುದಿಲ್ಲ. ನಾನು ಹಾಗೂ ಚಾಸಾ–42 ರವರುಎಂದಿಗೂ ಮಡಗಾಂವ್ ರೈಲ್ವೇ ನಿಲ್ದಾಣಕ್ಕೆ ಹೋಗಿ 1 ನೇ ಆರೋಪಿಯನ್ನು ಕರೆದುಕೊಂಡು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

19. ನಾನು ತೆಗೆದ ಫೋಟೊಗಳನ್ನು ವೃತ್ತ ನಿರೀಕ್ಷಕರ ಕಚೇರಿಯ ಸೋನಿ ಹ್ಯಾಂಡಿ ಕ್ಯಾಮೆರಾದಿಂದ ತೆಗೆದಿರುತ್ತೇನೆ. ಠಾಣೆಯಲ್ಲಿ ಕಂಪ್ಯೂಟರ್, ಕ್ಯಾಮೆರ ಇನ್ನಿತರೇ ತಾಂತ್ರಿಕ ಉಪಕರಣಗಳನ್ನು ನಿರ್ವಹಿಸಲು ಒಬ್ಬ ನಿರ್ದಿಷ್ಟ ವ್ಯಕ್ತಿಯನ್ನು ನೇಮಿಸಲಾಗುತ್ತದೆ ಎಂದರೆ ಸಾಕ್ಷಿಯು ಇತರ ಸಿಬ್ಬಂದಿಗಳೂ ನಿರ್ವಹಿಸಬಹುದಾಗಿದೆ ಎಂದು ನುಡಿಯುತ್ತಾರೆ. ಯಾವುದೇ ಒಂದು ಉಪಕರಣವನ್ನು ಠಾಣೆಯಿಂದ ಅಥವಾ ಕಚೇರಿಯಿಂದ ತೆಗೆದುಕೊಂಡು

ಹೋಗಬೇಕಾದಲ್ಲಿ ಅದಕ್ಕೆ 'movement register' ನಲ್ಲಿ ನಮೂದಿಸಬೇಕಾಗುತ್ತದೆ ಎಂದರೆ, ಸಾಕ್ಷಿಯು ತನಿಖಾಧಿಕಾರಿಗಳು ನಮೂದಿಸುತ್ತಾರೆ ಎಂದು ನುಡಿಯುತ್ತಾರೆ. ನಿಪಿ–62 ಪಂಚನಾಮೆಯ ಪಂಚರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ನಿಪಿ–62 ಪಂಚನಾಮೆಯ ಕಾಲಕ್ಕೆ ನಾನು ಹಾಜರಿರಲಿಲ್ಲ ಹಾಗೂ ನಿಪಿ–63 ಫೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೊವನ್ನು ನಾನು ಹಾಗೂ ತನಿಖಾಧಿಕಾರಿಗಳು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ದಿ.06–12–2018 ರಂದು 1 ನೇ ಆರೋಪಿಯು ಸಂಚು ರೂಪಿಸಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿಲ್ಲ, ಕೋಗಿಲ್ ಬನದ ಬಳಿ ಕರೆದುಕೊಂಡು ಹೋಗಿ ಯಾವುದೇ ಸ್ಥಳ ತೋರಿಸಿಲ್ಲ, ಅಲ್ಲಿ ತನಿಖಾಧಿಕಾರಿಗಳು ನಿಪಿ–60 ರಂತೆ ಪಂಚನಾಮೆ ಮಾಡಿಲ್ಲ ಹಾಗೂ ನಾನು ನಿಪಿ–61 ರಂತೆ ಫೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ.

20. ದಿ.07–12–2018 ರಂದು ಚಾಸಾ–36 ರವರು ಯಾವುದೇ ವಾಹನವನ್ನು ತಂದು ಹಾಜರುಪಡಿಸಿಲ್ಲ, ನಿಪಿ–72 ರಂತೆ ಪಂಚನಾಮೆ ಮಾಡಿಲ್ಲ, ನಿಪಿ–73 ರಂತೆ ಫೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ನಮ್ಮನ್ನು ಅಲಿಗದ್ದಾದ ತನ್ನ ಕಚೇರಿಯ ಬಳಿ ಕರೆದುಕೊಂಡು ಹೋಗಿ, ಕಾರನ್ನು ತೋರಿಸಿಲ್ಲ ಮತ್ತು ಅಲ್ಲಿ ನಿಪಿ–74 ರಂತೆ ಪಂಚನಾಮೆ ಮಾಡಿಲ್ಲ, ನಿಪಿ–75 ರಂತೆ ಫೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಬಳಸಿದ ಕ್ಯಾಮೆರಾದ ಮಾಡೆಲ್ ನಂಬರನ್ನು ನಾನು ನೀಡಿದ 65–ಬಿ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು, ಸೋನಿ ಹ್ಯಾಂಡಿ ಕ್ಯಾಮೆರಾ ಬಳಸಿರುವುದಾಗಿ ಎಂದು ನುಡಿಯುತ್ತಾರೆ. ಫೋಟೊ ಪ್ರಿಂಟ್ ಮಾಡಲು ಬಳಸಿದ ಕಂಪ್ಯೂಟರಿನ ಬಗ್ಗೆ 65–ಬಿ ಪ್ರಮಾಣ ಪತ್ರದಲಲ್ಲಿ ನಮೂದಿಸಿಲ್ಲ ಎಂದರೆ ಸರಿ, ಆದರೆ ಪ್ರಿಂಟರ್ ಹೆಸರು ನಮೂದಿಸಿರುವುದಾಗಿ ನುಡಿಯುತ್ತಾರೆ. ಪ್ರಿಂಟರ್ ನ ಮಾಡೆಲ್ ನಂಬರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಫೋಟೊ ಪ್ರಿಂಟ್ ಮಾಡಲು ಬಳಸಿದ ಕಂಪ್ಯೂಟರ್ ಸುಸ್ಥಿತಿಯಲ್ಲಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿಯಲ್ಲ. ಫೋಟೊ ಸ್ಟುಡಿಯೋದಲ್ಲಿ ಸದರಿ ಫೋಟೊಗಳನ್ನು ನಿರ್ವಹಿಸುತ್ತಿದ್ದವರ ಹೆಸರು ನನಗೆ ಗೊತ್ತಿಲ್ಲ ಹಾಗೂ ಅವರ ಹೆಸರನ್ನು ನಮೂದಿಸುವ ಅವಶ್ಯಕತೆ ನನಗೆ ಕಂಡುಬರಲಿಲ್ಲ. 65–ಬಿ ಪ್ರಮಾಣ ಪತ್ರದಲ್ಲಿ ನೀಡಿರುವ ಮಾಹಿತಿಯು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನಾನು ನೀಡಿದ 65–ಬಿ ಪ್ರಮಾಣ ಪತ್ರವು ನಿಯಮಾನುಸಾರ ಇರುವುದಿಲ್ಲ ಹಾಗೂ ಅದನ್ನು ಸೃಷ್ಟಿಸಿಲಾಗಿದೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನಗೆ 65–ಬಿ ಪ್ರಮಾಣ ಪತ್ರ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

21. ದಿ. 23–10–2018 ರಂದು ನಾನು ಬೆಳಿಗ್ಗೆ 7.30 ಗಂಟೆಗೆ ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಗೆ ಹೋಗಿರುತ್ತೇನೆ. ಆನಂತರ ತನಿಖಾಧಿಕಾರಿಗಳು ನನಗೆ ಕಾರವಾರದ ನಗರ ಠಾಣೆಗೆ ಬರುವಂತೆ ತಿಳಿಸಿದ್ದು, ಅದರಂತೆ ನಾನು 8.30 ಗಂಟೆಗೆ ನಗರ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ತನಿಖೆಗೆ ಸಹಾಯಕನಾಗಿ ಬರುವಂತೆ ನನಗೆ ಯಾವುದೇ ಲಿಖಿತ ಆದೇಶ ಮಾಡಿರುವುದಿಲ್ಲ. ನಾನು ಠಾಣೆಗೆ ಹೋಗುವ ಸಮಯದಲ್ಲಿ ಅದಾಗಲೇ ತನಿಖಾಧಿಕಾರಿಗಳು 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ಮಾಡುತ್ತಿದ್ದರು, ನಾನು ಹೋದ ನಂತರವೂ ಸಹ 8.30 ರಿಂದ 9.40 ರವರೆಗೆ ವಿಚಾರಣೆ ಮಾಡಿರುತ್ತಾರೆ. ನಾನು ಠಾಣೆಗೆ ಹೋಗುವ ಪೂರ್ವದಲ್ಲಿ ಯಾವ ವಿಷಯದ ಬಗ್ಗೆ ವಿಚಾರಣೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳ ಕೊಠಡಿಯಲ್ಲಿ 2 ಮತ್ತು 3 ನೇ ಆರೋಪಿತರ ವಿಚಾರಣೆ ಮಾಡಿರುತ್ತಾರೆ ಹಾಗೂ ಅವರು 1 ನೇ ಆರೋಪಿ ಹೇಳಿದ ಮೇರೆಗೆ ಮೃತ ಪ್ರೇಮ್ ಕುಮಾರನನ್ನು ಕೊಲೆ ಮಾಡಿರುವುದಾಗಿ ಹೇಳಿರುತ್ತಾರೆ. ತನಿಖಾಧಿಕಾರಿಗಳು 2 ಮತ್ತು 3 ನೇ ಆರೋಪಿತರನ್ನು ವಿಚಾರಣೆ ಮಾಡುವ ಕಾಲಕ್ಕೆ ಚಾಸಾ–68, ಚಾಸಾ–44, ಚಾಸಾ–47, ಭದ್ರಿಕಾ ಸಿಬ್ಬಂದಿಗಳು, ಮೃತನ ಸಂಬಂಧಿಕರಾದ ರಾಜೇಶ್ ಮತ್ತು ರಾಹುಲ್ ಎನ್ನುವವರಿದ್ದರು ಮತ್ತು ಇಬ್ಬರು ಪಂಚರು ಹಾಜರಿದ್ದರು.

22. 2 ಮತ್ತು 3 ನೇ ಆರೋಪಿತರನ್ನು ಒಟ್ಟಾಗಿ ವಿಚಾರಣೆ ಮಾಡಿರುತ್ತಾರೆ. ಆರೋಪಿತರ ವಿಚಾರಣಾ ಸನ್ನಿವೇಶವನ್ನು ನಾನು ವೀಡಿಯೋ ಮಾಡಿರುವುದಿಲ್ಲ. ಬೇರೆ ಯಾವ ಸಿಬ್ಬಂದಿಗಳೂ ವೀಡಿಯೋ ಮಾಡಿರುವುದಿಲ್ಲ. ನಾವು ಸ್ಥಳಕ್ಕೆ ಹೋಗುವ ಸಮಯದಲ್ಲಿ ಪೊಲೀಸ್ ಇಲಾಖೆಯ ಬಸ್ ನಲ್ಲಿ ಸುಮಾರು 12 ಜನ ಪೊಲೀಸ್ ಸಿಬ್ಬಂದಿಗಳು, ಇಬ್ಬರು ಪಂಚರು, ಮೃತನ ಸಂಬಂಧಿಕರು, 2 ಮತ್ತು 3 ನೇ ಆರೋಪಿತರು ಇದ್ದರು. 12 ಜನ ಪೊಲೀಸ್ ಸಿಬ್ಬಂದಿಗಳ ಪೈಕಿ ನಾವು ಸುಮಾರು 9 ಜನ ಸಿವಿಲ್ ಪೊಲೀಸರು ಹಾಗೂ ಬಾಕಿ ಉಳಿದವರು 4–5 ಡಿ.ಎ.ಆರ್. ಪೊಲೀಸರು ಇದ್ದೆವು. ಬಸ್ಸಿನೊಂದಿಗೆ ಬಂದಿದ್ದ ಜೀಪ್ ನಲ್ಲಿ ಚಾಲಕ ಮಾತ್ರ ಇದ್ದರು. ಆ್ಯಂಬುಲೆನ್ಸ್ ನಲ್ಲಿ ಒಬ್ಬರು ವೈದ್ಯರು, ಒಬ್ಬರು ವೈದ್ಯಕೀಯ ಸಹಾಯಕರು ಹಾಗೂ ಇತರೇ ಸಹಾಯಕರು, ಆದರೆ ಎಷ್ಟು ಜನರು ಎಂದು ಹೇಳಲು ಬರುವುದಿಲ್ಲ. ಸ್ಥಳಕ್ಕೆ ಹೋಗುವ ಸಮಯದಲ್ಲಿ

ಮೊದಲಿಗೆ ಬಸ್, ಅದರ ಹಿಂದೆ ಜೀಪ್ ಮತ್ತು ಆ್ಯಂಬುಲೆನ್ಸ್ ಹೋಗುತ್ತಿತ್ತು. ಈ ಮೂರು ವಾಹನಗಳನ್ನು ಬಿಟ್ಟು ಬೇರೆ ಯಾವುದೇ ವಾಹನ ಬಂದಿರುವುದಿಲ್ಲ.

23. ನಾವು ಉಳವಿ ಚೆಕ್ ಪೋಸ್ಟ್ ತಲುಪಿದಾಗ ಸುಮಾರು 11.45 ಗಂಟೆಯಾಗಿರುತ್ತದೆ. ಉಳವಿ ಚೆಕ್ ಪೋಸ್ಟ್ ನಿಂದ ಶವ ಬಿದ್ದ ಸ್ಥಳಕ್ಕೆ ಸಮಾರು 3.5 ಯಿಂದ 4 ಕಿ.ಮೀ. ಅಂತರವಾಗುತ್ತದೆ. ಉಳವಿ ಚೆಕ್ ಪೋಸ್ಟ್ ನಿಂದ ಸುಮಾರು 2 ಕಿ.ಮೀ. ವರೆಗೆ ದ್ವಿಚಕ್ರ ವಾಹನದಲ್ಲಿ ಮಾತ್ರ ಹೋಗಬಹುದಾಗಿರುತ್ತದೆ, ಆನಂತರ 1.5 ಕಿ.ಮೀ. ವರೆಗೆ ಯಾವುದೇ ವಾಹನಗಳು ಹೋಗುವುದಿಲ್ಲ. ಸದರಿ ಸ್ಥಳವನ್ನು ತಲುಪಲು ಸುಮಾರು 20 ನಿಮಿಷಗಳ ಕಾಲ ಕಾಲುನಡಿಗೆಯಲ್ಲಿ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ 2 ಮತ್ತು 3 ನೇ ಆರೋಪಿತರು ಸ್ವಲ್ಪ ದೂರದಿಂದ ಶವವನ್ನು ತೋರಿಸಿದ್ದು, ಆನಂತರ ನಾವು ಶವ ಬಿದ್ದ ಸ್ಥಳಕ್ಕೆ ಹೋಗಿ ಶವವನ್ನು ನೋಡಿರುತ್ತೇವೆ. ಮೃತನ ಶವವನ್ನು ನಮ್ಮೊಂದಿಗೆ ಬಂದಿದ್ದ ಆತನ ಇಬ್ಬರು ಸಂಬಂಧಿಕರು ನೋಡಿ ಗುರುತಿಸಿರುತ್ತಾರೆ. ಶವ ಬಿದ್ದ ಸ್ಥಳದಲ್ಲಿ ಶವವು ಯಾವ ರೀತಿಯಲ್ಲಿ ಬಿದ್ದಿರುತ್ತದೆ, ಅದೇ ರೀತಿಯಲ್ಲಿ ಫೋಟೊ ತೆಗೆದಿರುತ್ತೇನೆ ಆದರೆ ವೀಡಿಯೋ ಮಾಡಿರುವುದಿಲ್ಲ, ಬೇರೆ ಸಿಬ್ಬಂದಿಗಳು ವೀಡಿಯೋ ಮಾಡಿದ್ದನ್ನು ನಾನು ನೋಡಿರುವುದಿಲ್ಲ. ನಾವು ಸ್ಥಳಕ್ಕೆ ಹೋದಾಗ ಸುಮಾರು 2–3 ಜನ ಅರಣ್ಯ ಸಿಬ್ಬಂದಿಗಳೂ ಸಹ ಅಲ್ಲಿಗೆ ಬಂದಿರುತ್ತಾರೆ.

24. ಶವ ಬಿದ್ದ ಸ್ಥಳಕ್ಕೆ ಮಾಧ್ಯಮದವರು ಬಂದಿದ್ದರಾ ಅಥವಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಆ ದಿನ ಸ್ಥಳದಲ್ಲಿ ಒಟ್ಟು 5 ಪಂಚನಾಮೆಗಳನ್ನು ಮಾಡಿರುತ್ತಾರೆ. ಆ ದಿನ ಸುಮಾರು 12.15 ಗಂಟೆಯವರೆಗೆ ಶವ ಬಿದ್ದ ಸ್ಥಳದ ಪಂಚನಾಮೆಯನ್ನು, 12.30 ರಿಂದ 2.00 ಗಂಟೆಯ ವರೆಗೆ ಶವ ತನಿಖಾ ಪಂಚನಾಮೆ, 2.15 ರಿಂದ 2.45 ಗಂಟೆಯವರೆಗೆ ಕಣ್ಣಿಗೆ ಬಟ್ಟೆ ಕಟ್ಟಿ ಹಲ್ಲೆ ಮಾಡಿದ ಸ್ಥಳದ ಪಂಚನಾಮೆ, ಆನಂತರ ಸುಮಾರು ½ ಗಂಟೆಯ ಕಾಲ 3 ನೇ ಆರೋಪಿಯು ಬೈಕ್ ನಿಲ್ಲಿಸಿಟ್ಟ ಸ್ಥಳದ ಪಂಚನಾಮೆ, ಆನಂತರ 2 ನೇ ಆರೋಪಿಯು ಕಾರನ್ನು ನಿಲ್ಲಿಸಿಟ್ಟ ಸ್ಥಳದ ಪಂಚನಾಮೆಯನ್ನು ಮಾಡಿರುತ್ತಾರೆ. ಶವ ಬಿದ್ದ ಸ್ಥಳದಿಂದ ಬೈಕ್ ನಿಲ್ಲಿಸಿಟ್ಟ ಸ್ಥಳದ ವರೆಗೆ ಸುಮಾರು ಒಂದೂವರೆ ಕಿ. ಮೀ. ಅಂತರವಾಗುತ್ತದೆ. ಬೈಕ್ ನಿಲ್ಲಿಸಿಟ್ಟ ಸ್ಥಳದಲ್ಲಿ ಟಯರ್ ಗುರುತುಗಳು ಇದ್ದವು ಆದರೆ ಅವು 4 ಚಕ್ರದ ವಾಹನಗಳ ಟಯರ್ ಗುರುತುಗಳು ಎಂದು ಹೇಳಲು ಬರುವುದಿಲ್ಲ. 3 ನೇ ಆರೋಪಿಯು ಬೈಕ್ ನಿಲ್ಲಿಸಿಟ್ಟ ಸ್ಥಳವನ್ನು ದಾಟಿ ಮುಂದೆ ಶವ ಬಿದ್ದ ಸ್ಥಳಕ್ಕೆ ನಾವು ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗುವ ಸಮಯದಲ್ಲಿ 3 ನೇ ಆರೋಪಿಯು ತಾನು ಬೈಕ್ ನಿಲ್ಲಿಸಿಟ್ಟ ಸ್ಥಳವನ್ನು ತನಿಖಾಧಿಕಾರಿಗೆ ತೋರಿಸಿದ್ದಾನೋ ಇಲ್ಲವೋ

ಎಂದು ನನಗೆ ಗೊತ್ತಿಲ್ಲ. ಉಳವಿ ಚೆಕ್ ಪೋಸ್ಟ್ ನಿಂದ ಸುಮಾರು 50 ಮೀ. ದೂರದಲ್ಲಿ 2 ನೇ ಆರೋಪಿಯು ತಾನು ಕಾರು ನಿಲ್ಲಿಸಿಟ್ಟ ಸ್ಥಳ ಎಂದು ತೋರಿಸಿರುತ್ತಾನೆ.

25. ಹಲ್ಲೆ ಮಾಡಿದ ಸ್ಥಳದಲ್ಲಿ ರಕ್ತದ ಕಲೆಗಳನ್ನು ನಾನು ನೋಡಿರುವುದಿಲ್ಲ. ಶವ ಬಿದ್ದ ಸ್ಥಳದಲ್ಲಿ ರಕ್ತ ಬಿದ್ದಂತಹ ಗುರುತು ಇದ್ದು, ಅದು ತೇವಾಂಶದಿಂದ ಕೂಡಿದ ಪ್ರದೇಶವಾಗಿತ್ತು. ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆಯನ್ನು ಎಷ್ಟು ಗಂಟೆಯವರೆಗೆ ಮಾಡಿದರು ಎಂದರೆ ಸಾಕ್ಷಿಯು, ಸಮಯ ಹೇಳಲು ಬರುವುದಿಲ್ಲ, ಆದರೆ ಶವ ತನಿಖಾ ಪಂಚನಾಮೆಯ ನಂತರ ವೈದ್ಯಾಧಿಕಾರಿಗಳು ಮರಣೋತ್ತರ ಪರೀಕ್ಷೆಯನ್ನು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಆತನ ಸಂಬಂಧಿಕರಿಗೆ ಬಿಟ್ಟುಕೊಟ್ಟಿರುತ್ತಾರೆ. ಆನಂತರ ಅವರು ಶವವನ್ನು ತೆಗೆದುಕೊಂಡು ಹೋಗಿರುತ್ತಾರೆ. ಶವವನ್ನು ಯಾವ ವಾಹನದಲ್ಲಿ ತೆಗೆದುಕೊಂಡು ಹೋದರು ಎಂದು ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಗಳ ನಂತರ ಶವವನ್ನು ಹಾಗೂ ಆತನ ಸಂಬಂಧಿಕರನ್ನು ನಾನು ನೋಡಿರುವುದಿಲ್ಲ. ನಾವು ಬಸ್ಸಿನ ಹತ್ತಿರ ಬಂದಾಗ ಮೂರೂ ವಾಹನಗಳು ಸ್ಥಳದಲ್ಲಿದ್ದವು ಹಾಗೂ ಮೂರೂ ವಾಹನಗಳು ಕಾರವಾರಕ್ಕೆ ಒಟ್ಟಿಗೇ ಬಂದಿರುತ್ತವೆ. ಆ ಸಮಯದದಲ್ಲಿ ಮೃತನ ಸಂಬಂಧಿಕರು ಮೃತ ದೇಹದೊಂದಿಗೆ ನಮ್ಮೊಂದಿಗೆ ಬಂದಿರುವುದಿಲ್ಲ. ನಾವು ಕಾರವಾರ ಪೊಲೀಸ್ ಠಾಣೆಗೆ ಬಂದಾಗ ಸುಮಾರು 6.30 ಗಂಟೆಯಾಗಿರುತ್ತದೆ. ಆನಂತರ ಕಾರವಾರದ ಸಿವಿಲ್ ಆಸ್ಪತ್ರೆಯ ಬಳಿಗೆ, 2 ನೇ ಆರೋಪಿ, ಇಬ್ಬರು ಪಂಚರು, ಪೊಲೀಸ್ ಸಿಬ್ಬಂದಿಗಳು ಪಂಚನಾಮೆ ಮಾಡಲು ಹೋಗಿರುತ್ತೇವೆ. ನಾವು ಸಿವಿಲ್ ಆಸ್ಪತ್ರೆಯ ಆವರಣದಲ್ಲಿ ಸುಮಾರು ಒಂದು ಗಂಟೆಯ ಕಾಲ ಇದ್ದೆವು. ನಾನು ಈ ಪ್ರಕರಣದಲ್ಲಿ ತನಿಖಾ ಸಹಾಯಕನಾಗಿ ಕೆಲಸ ಮಾಡಿಲ್ಲ ಹಾಗೂ ಯಾವುದೇ ಫೋಟೊಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

26. ದಿ.26-10-2018 ರಂದು ಪೊಲೀಸ್ ವ್ಯಾನ್ ಹಾಗೂ ಪೊಲೀಸ್ ಜೀಪ್ ನಲ್ಲಿ ಗಣೇಶ್ ಗುಡಿಯ ಬಳಿ ಹೋಗಿರುತ್ತೇವೆ. ಗಣೇಶ ಗುಡಿಯ ಬಳಿ ಹೋದಾಗ ಸುಮಾರು ಬೆಳಿಗ್ಗೆ 8.30 ಗಂಟೆಯಾಗಿರುತ್ತದೆ. ನಾವು ಸ್ಥಳಕ್ಕೆ ಹೋದ ನಂತರ ಸುಮಾರು ಒಂದೂವರೆ ಗಂಟೆಗಳ ನಂತರ ಕತ್ತಿ, ಬಟ್ಟೆಗಳಿಗಾಗಿ ಹುಡುಕಾಟ ಪ್ರಾರಂಭ ಮಾಡಿರುತ್ತಾರೆ. ಗಣೇಶ್ ಗುಡಿಯ ಸೇತುವೆಯ ಕೆಳಗಿನ ಬದಿಯಲ್ಲಿ ಹುಡುಕಾಟ ನಡೆಸಿರುತ್ತಾರೆ. ಹುಡುಕಾಟ ನಡೆಸಲು ಸುಮಾರು 4 ಜನರು ಮುಳುಗು ತಜ್ಞರನ್ನು ಸ್ಥಳಕ್ಕೆ ಕರೆಸಿರುತ್ತಾರೆ. 2 ನೇ ಆರೋಪಿಯು ಸೇತುವೆಯ ಮಧ್ಯ ಭಾಗದಲ್ಲಿ ತಾನು ಕತ್ತಿ, ಬಟ್ಟೆ ಮತ್ತು ಇತರ ವಸ್ತುಗಳನ್ನು ಎಸೆದ ಸ್ಥಳ ಎಂದು

ತೋರಿಸಿರುತ್ತಾನೆ. ಆತ ತೋರಿಸಿದ ಸ್ಥಳದ ಸುತ್ತಮುತ್ತ ಸ್ಥಳದಲ್ಲಿ ಹುಡುಕಾಟ ನಡೆಸಿರುತ್ತಾರೆ. ಕತ್ತಿಯು ಸೇತುವೆಯ ಯಾವ ಪಿಲ್ಲರ್ ಬಳಿ ದೊರಕಿತ್ತು ಎಂದು ಹೇಳಲು ಬರುವುದಿಲ್ಲ. ಮಧ್ಯಾಹ್ನ ಸುಮಾರು 2.30 ಯಿಂದ 3.00 ಗಂಟೆಯ ಅವಧಿಯಲ್ಲಿ ಒಂದು ಕತ್ತಿ ಸಿಕ್ಕಿರುತ್ತದೆ. ಒಂದು ಕತ್ತಿ ಸಿಕ್ಕ ನಂತರವೂ ಸಹ ಸ್ವಲ್ಪ ಸಮಯದವರೆಗೆ ಹುಡುಕಾಟ ನಡೆಸಿರುತ್ತಾರೆ. ಕತ್ತಿ ಸಿಕ್ಕ ನಂತರ ಮಧ್ಯಾಹ್ನ ಸುಮಾರು 3.30 ಗಂಟೆಯವರೆಗೂ ಸಹ ಹುಡುಕಾಟ ನಡೆಸಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ, ನದಿಯಲ್ಲಿ ನೀರಿನ ರಭಸ ಹೆಚ್ಚಾಗಿತ್ತು. ನಂತರ ನೀರನ್ನು ಬಂದ್ ಮಾಡಿಸಿ, ನೀರಿನ ರಭಸ ಕಡಿಮೆಯಾದ ನಂತರ ಹುಡುಕಾಟ ನಡೆಸಿರುತ್ತೇವೆ. ಗಣೇಶ್ ಗುಡಿ ಸೇತುವೆಯ ಬಳಿ ನೀರಿನಲ್ಲಿ ಎಂ.ಓ-1 ಕತ್ತಿ ದೊರೆತಿಲ್ಲ ಎಂದರೆ ಸರಿಯಲ್ಲ. ನಾವೇ ತೆಗೆದುಕೊಂಡು ಹೋಗಿದ್ದ ಕತ್ತಿಯನ್ನು ಡ್ಯಾಮ್ ನೋಡಲು ಬಂದಂತಹ ಯಾತ್ರಿಗಳ ಕೈಯಲ್ಲಿ ಕೊಟ್ಟು, ಅವರನ್ನು ನಿಲ್ಲಿಸಿ ಫೋಟೊ ತೆಗೆದಿರುತ್ತೇವೆ ಎಂದರೆ ಸರಿಯಲ್ಲ.

27. ಗಣೇಶ್ ಗುಡಿಯ ಬಳಿ ಹುಡುಕಾಟ ಹಾಗೂ ಪಂಚನಾಮೆ ಎಲ್ಲವೂ ಮಧ್ಯಾಹ್ನ ಸುಮಾರು 3.30 ಗಂಟೆಗೆ ಮುಗಿದಿರುತ್ತದೆ. ಗಣೇಶ್ ಗುಡಿಯಿಂದ ದಾಂಡೇಲಿಯವರೆಗೆ ಅಂದಾಜು ಸುಮಾರು 12-15 ಕಿ.ಮೀ. ಅಂತರ ಇರಬಹುದು. 3 ನೇ ಆರೋಪಿಯ ಮನೆಯ ಬಳಿ ತಲುಪಿದಾಗ ಸಂಜೆ 4.00 ಗಂಟೆಯಾಗಿತ್ತು. ಅಲ್ಲಿಗೆ ಹೋದಾಗ, ಆತನ ಮನೆಯವರಿಗೆ ಏನಾದರೂ ವಿಷಯ ತಿಳಿಸಿದ್ದೀರಾ? ಎಂದರೆ, ಸಾಕ್ಷಿಯು 3 ನೇ ಆರೋಪಿಯು ನಮ್ಮ ಜೊತೆಯಲ್ಲಿ ಇದ್ದರಿಂದ ನಾವು ಯಾವುದೇ ವಿಷಯ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. 3 ನೇ ಆರೋಪಿಯ ಮನೆಯು ಎಷ್ಟು ಕೊಠಡಿಯ ಮನೆಯಾಗಿತ್ತು ಎಂದು ಹೇಳಲು ಬರುವುದಿಲ್ಲ. 3 ನೇ ಆರೋಪಿಯು ಯಾವ ಕೊಠಡಿಯಲ್ಲಿ ಬಂಗಾರದ ಚೈನನ್ನು ಇಟ್ಟಿದ್ದ ಎಂದು ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು, 3 ನೇ ಆರೋಪಿಯು ಮನೆಯ ಒಳಗೆ ಹೋಗಿ, ಬಂಗಾರದ ಚೈನನ್ನು ತಂದು ಹಾಜರುಪಡಿಸಿರುತ್ತಾನೆ ಎಂದು ನುಡಿಯುತ್ತಾರೆ. 3 ನೇ ಆರೋಪಿಯು ಯಾವ ಜಾಗದಿಂದ ಚೈನನ್ನು ಹಾಗೂ ಬಟ್ಟೆಗಳನ್ನು ತೆಗೆದುಕೊಂಡನು, ಆ ಜಾಗದಲ್ಲಿ ನಾನು ಫೋಟೊ ತೆಗೆದಿರುವುದಿಲ್ಲ. ತನಿಖಾಧಿಕಾರಿಯು 3 ನೇ ಆರೋಪಿಯೊಂದಿಗೆ ಆತನ ಮನೆಯ ಒಳಗೆ ಹೋಗಿರುವುದಿಲ್ಲ. 3 ನೇ ಆರೋಪಿಯು ಯಾವುದೇ ಚೈನನ್ನು ಅಥವಾ ಬಟ್ಟೆಗಳನ್ನು ತನ್ನ ಮನೆಯಿಂದ ತಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

28. 3 ನೇ ಆರೋಪಿ ಹಾಗೂ 2 ನೇ ಆರೋಪಿಯ ಮನೆಯು ನಡುವೆ ಸುಮಾರು 2 ರಿಂದ 2.5 ಕಿ.ಮೀ. ಅಂತರವಿರುತ್ತದೆ. 2 ನೇ ಆರೋಪಿಯ ಮನೆಯ ಬಳಿ ಸಂಜೆ ಸುಮಾರು 4.45 ರಿಂದ 5.30 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತೇವೆ. 2 ನೇ ಆರೋಪಿಯ ಮನೆಯ ಒಳಗೂ ಸಹ ನಾವಾಗಲೀ ಅಥವಾ ತನಿಖಾಧಿಕಾರಿಯಾಗಲೀ ಹೋಗಿರುವುದಿಲ್ಲ. 2 ಮತ್ತು 3 ನೇ ಆರೋಪಿತರ ಮನೆಯ ಹೊರಗೆ ಆರೋಪಿತರು ವಸ್ತುಗಳನ್ನು ಹಾಜರಪಡಿಸಿದ ಸಮಯದಲ್ಲಿ ಫೋಟೊಗಳನ್ನು ತೆಗೆದಿರುತ್ತೇನೆ. 2 ನೇ ಆರೋಪಿಯು ಯಾವುದೇ ಮೊಬೈಲನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸದಿದ್ದರೂ ಸಹ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಣೇಶ್ ಗುಡಿಯ ಬಳಿ ಮತ್ತು ದಾಂಡೇಲಿಯಲ್ಲಿ 2 ಮತ್ತು 3 ನೇ ಆರೋಪಿತರ ಮನೆಯ ಬಳಿ ಪಂಚನಾಮೆ ಮಾಡಿದ ಬಳಿಕ, ಮರುದಿನ ತನಿಖಾಧಿಕಾರಿಗಳು ನಮ್ಮನ್ನು ಖಾನಾಪುರಕ್ಕೆ ಕರೆದುಕೊಂಡು ಹೋಗಿರುತ್ತಾರೆ. ದಿ.27-10-2018 ರಂದು ಮಧ್ಯಾಹ್ನ 12.15 ಗಂಟೆಗೆ ಚಾಸಾ-32 ರವರ ಗ್ಯಾರೇಜಿನ ಬಳಿ ಹೋಗಿರುತ್ತೇವೆ. ಆ ದಿನ ಖಾನಾಪುರಕ್ಕೆ ಹೋದಾಗ, ನಮ್ಮೊಂದಿಗೆ ಬಂದಿದ್ದ ಪಂಚರನ್ನೇ ಕರೆದುಕೊಂಡು ಹೋಗಿರುತ್ತೇವೆ. ಆ ದಿನ ನಾವು ಮಾರುತಿ ಜೆನ್ ಕಾರನ್ನು ಗ್ಯಾರೇಜಿನ ಸಮೀಪ ನೋಡಿರುತ್ತೇವೆ. ಚಾಸಾ-32 ರವರ ಗ್ಯಾರೇಜಿನ ಅಳತೆ ನನಗೆ ಗೊತ್ತಿಲ್ಲ. ಗ್ಯಾರೇಜಿನಲ್ಲಿ ಕಾರು ಇಟ್ಟಂತಹ ಸ್ಥಳವು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಕಾರಿನ ಕೀ ಯಾರ ಬಳಿ ಇತ್ತು ಎಂದು ನನಗೆ ಗೊತ್ತಿಲ್ಲ. ಕಾರನ್ನು ಯಾರು ತೆರೆದರು ಎಂದು ನನಗೆ ನೆನಪಿಲ್ಲ. ಮಾರುತಿ ಜೆನ್ ಕಾರನ್ನು ನಾವೇ ಕಾರವಾರದಿಂದ ಖಾನಾಪುರಕ್ಕೆ ತೆಗೆದುಕೊಂಡು ಹೋಗಿ, ಅದನ್ನು ನಾವೇ ಗ್ಯಾರೇಜಿನ ಬಳಿ ನಿಲ್ಲಿಸಿಟ್ಟು, ಫೋಟೊ ತೆಗೆದು, ಪಂಚನಾಮೆ ಮಾಡಿ, ಸುಳ್ಳು ಸಾಕ್ಷಿ ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ, ಕಾರಿನ ಒಳಗೆ ಕಾಗದ ಪತ್ರ ಹಾಗೂ ಸಾರಾಯಿ ಬಾಟಲಿಯನ್ನು ಇಟ್ಟು, ಸುಳ್ಳು ಸಾಕ್ಷಿ ಸೃಷ್ಠಿಸಿ, 2 ನೇ ಆರೋಪಿಯೇ ಕಾರನ್ನು ಅಲ್ಲಿ ನಿಲ್ಲಿಸಿರುತ್ತಾನೆ ಎಂದು ಸೃಷ್ಠಿಸಿರುತ್ತೇವೆ ಎಂದರೆ ಸರಿಯಲ್ಲ.

29. ದಿ.28-10-2018 ರಂದು ಸಂಡೇ ಮಾರ್ಕೆಟ್ ಗೆ 2 ಮತ್ತು 3 ನೇ ಆರೋಪಿತರು, ತನಿಖಾಧಿಕಾರಿಗಳು, ಇಬ್ಬರು ಪಂಚರು ಮತ್ತು ಪೊಲೀಸ್ ಸಿಬ್ಬಂದಿಗಳು ಪೊಲೀಸ್ ಜೀಪ್ ನಲ್ಲಿ ಹೋಗಿರುತ್ತೇವೆ. ಸಂಡೇ ಮಾರ್ಕೆಟ್ ನಲ್ಲಿ ಯಾವುದೇ ಫೋಟೊ ತೆಗೆದಿಲ್ಲ ಹಾಗೂ ನಾನು ಯಾವುದೇ ಪಂಚನಾಮೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ, ಕುಂಬಾರವಡಕ್ಕೂ ಸಹ ಹೋಗಿಲ್ಲ, ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ದಿ.29-10-2018 ರಂದು ಚಾಸಾ-

26 ರವರು ಯಾವುದೇ ಬೈಕನ್ನು ಹಾಜರುಪಡಿಸಿಲ್ಲ ಹಾಗೂ ಬೈಕ್ ಜಪ್ತು ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಫೋಟೊ ತೆಗೆದಿಲ್ಲ ಎಂದರೆ ಸರಿಯಲ್ಲ. ದಿ.01-01-2019 ರಂದು 3 ನೇ ಆರೋಪಿಯಿಂದ ಜಪ್ತುಪಡಿಸಿಕೊಂಡ ಚೈನನ್ನು ತನಿಖಾಧಿಕಾರಿಗಳು ಚಾಸಾ-37 ರವರ ಮುಂದೆ ಹಾಜರುಪಡಿಸಿ, ಬಂಗಾರದ ಖಚಿತತೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ನೀಡಿದ 65-ಬಿ ಪ್ರಮಾಣ ಪತ್ರವನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇನೆ. ಕ್ಯಾಮೆರಾದಲ್ಲಿದ್ದ ಫೋಟೊಗಳನ್ನು ಪ್ರಿಂಟ್ ಮಾಡಿಸಲು ಎಂದು ಕೊಟ್ಟಿದ್ದೀರಿ? ಎಂದರೆ ಸಾಕ್ಷಿಯು, ಆಗಿಂದಾಗ್ಗೇ ಪ್ರಿಂಟ್ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸುಮಾರು 4-5 ಬಾರಿ ಫೋಟೊ ಸ್ಟುಡಿಯೋಗೆ ಹೋಗಿರುತ್ತೇನೆ. ಸ್ಟುಡಿಯೋದವರು ನೀಡಿದ ರಶೀದಿಯನ್ನು ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಒಟ್ಟು ಎಷ್ಟು ಫೋಟೊಗಳನ್ನು ಪ್ರಿಂಟ್ ಮಾಡಿಸಿದ್ದೆ ಹಾಗೂ ಒಟ್ಟು ಎಷ್ಟು ಹಣವನ್ನು ನೀಡಿದ್ದೆ ಎಂದು ನನಗೆ ನೆನಪಿಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಫೋಟೊಗಳನ್ನು ತೆಗೆದಿಲ್ಲ, ಪ್ರಿಂಟ್ ಮಾಡಿಸಿಲ್ಲ, ಸ್ಟುಡಿಯೋಗೆ ಯಾವುದೇ ಹಣ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-154/65-ಬಿ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ, ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರುವಿಚಾರಣೆ – ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.